# ಕನ್ನಡ ಚಲನಚಿತ್ರ ಮತ್ತು ಕನ್ನಡ ಸಾಹಿತ್ಯ

**ಮಾದಲಾಂಬಿಕೆ ಟಿ.ಎಸ್**
ಸಹಾಯಕ ಪ್ರಾಧ್ಯಾಪಕರು, ಜೆ.ಎಸ್.ಎಸ್ ಕಲಾ.ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ನಂಜನಗೂಡು

**OPEN ACCESS**

Volume: 12

Special Issue: 1

Month: October

Year: 2024

E-ISSN: 2582-0397

P-ISSN: 2321-788X

Impact Factor: 3.025

Citation:
ಎಸಮಾದಲಾಂಬಿಕೆ ಟಿ. "ಕನನಡ ಚಲನಚಿತರ ಮತತು ಕನನಡ ಸಾಹಿತಯ." *Shanlax International Journal of Arts, Science and Humanities,* vol. 12, no. S1, 2024, pp. 254–57.

DOI:
https://doi.org/10.34293/sijash.v12iS1-Oct.8317

ಕನ್ನಡ ಭಾಷೆಗೆ ಸುಮಾರು 2,500 ವರ್ಷಗಳ ಸುದೀರ್ಘವಾದ ಇತಿಹಾಸವಿದೆ. ಪ್ರಪಂಚಾದ್ಯಂತ ಸುಮಾರು 40 ಮಿಲಿಯನ್ ಜನರು ಮಾತನಾಡುವ ಪ್ರಾಚೀನ ಕನ್ನಡ ಭಾಷೆಯು ಆಸಕ್ತಿದಾಯಕ ಇತಿಹಾಸ ಮತ್ತು ಅಸಾಧಾರಣವಾದ ಶ್ರೀಮಂತ ಸಾಹಿತ್ಯವನ್ನು ಹೊಂದಿದೆ. ಸಹಜವಾಗಿಯೇ ಹಲವು ಭಾರತೀಯ ಭಾಷೆಗಳಂತೆ ಕನ್ನಡಕ್ಕೂ ತನ್ನದೇ ಆದ ಸ್ವತಂತ್ರ ಲಿಪಿ ಇದೆ. ಕನ್ನಡ ಭಾಷೆಯು ಪ್ರಪಂಚದಲ್ಲಿ ಅತೀ ದುಂಡಾಗಿ ಬರೆಯುವ ಭಾಷೆ ಎಂದು ಪ್ರಸಿದ್ಧವಾಗಿದೆ. ಕನ್ನಡ ಸಾಹಿತ್ಯದಲ್ಲಿ ಆದಿಕವಿ ಎಂದು ಗುರುತಿಸುವುದು ಪಂಪನನ್ನೇ ಬೌದ್ಧರು ಆದಿಕವಿಗಳೆಂದು ಹೇಳಿದರೂ, ಬೌದ್ಧ ಧರ್ಮದ ಕೃತಿಗಳು ಲಭ್ಯವಿಲ್ಲ ಬೌದ್ಧರ ಧರ್ಮದೊಂದಿಗೆ ಅವರು ರಚಿಸಿದ ಕೃತಿಗಳು ನಾಶವಾಗಿದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕ್ರಿಸ್ತ ಶಕ 450ರಲ್ಲಿ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಲ್ಮಿಡಿ ಎಂಬ ಊರಿನಲ್ಲಿ ದೊರೆತ ಕನ್ನಡದ ಮೊದಲನೆಯ ಶಾಸನ ಹಲ್ಮಿಡಿ ಶಾಸನ ಇಲ್ಲಿರುವ ಭಾಷೆಯನ್ನು ಬಿ ಎಲ್ ರೈಸ್, ಆರ್ ನರಸಿಂಹಾಚಾರ್, ಡಿ. ಎಲ್. ನರಸಿಂಹ ಸ್ವಾಮಿಯವರು ಪೂರ್ವದ ಹಳೆಗನ್ನಡ ಭಾಷೆ ಎಂದು ಗುರುತಿಸಿದ್ದಾರೆ. ಕ್ರಿಸ್ತಶಕ 7ನೇ ಶತಮಾನದ ಬಾದಾಮಿ ಶಾಸನ ಕಪ್ಪೆ ಅರಭಟ್ಟನ ಬಗ್ಗೆ ತಿಳಿಸುವ ಶಾಸನ ಇದಾಗಿದೆ. ಇದೇ ಕಾಲದ ಶ್ರವಣಬೆಳಗೊಳ ಶಾಸನವೊಂದು 7.69ನೇ ಶತಮಾನದಲ್ಲಿ ಹಲವು ಕವಿಗಳಿದ್ದರೆಂದು ತಿಳಿಯುತ್ತದೆ. ಆದರೆ ಅವರ ಕೃತಿಗಳು ಮಾತ್ರ ಲಭ್ಯವಿಲ್ಲ ನಮಗೆ ದೊರೆತಿರುವ ಮೊಟ್ಟಮೊದಲ ಕೃತಿಯೆಂದರೆ ಕವಿರಾಜಮಾರ್ಗ ಇದರ ಕರ್ತೃ ಶ್ರೀವಿಜಯ. ಕವಿರಾಜಮಾರ್ಗಕಾರ ತನಗಿಂತ ಹಿಂದಿನ ಹಲವಾರು ಕವಿಗಳನ್ನು ಹೆಸರಿಸಿದ್ದಾರೆ. ವಿಮಳೋದಯ, ಜಯ ಬಂಧು, ದುರ್ವಿನಿತ ಮೊದಲಾದವರು ಗದ್ಯಕವಿಗಳೆಂದು ಪರಮ ಶ್ರೀವಿಜಯ, ಕವೀಶ್ವರ, ಪಂಡಿತ ಚಂದ್ರ ಲೋಕಪಾಲರು ಪದ್ಮ ಕವಿಗಳೆಂದೂ ಹೇಳಿದ್ದಾನೆ. ಕನ್ನಡ ಸಾಹಿತ್ಯವನ್ನು ನಾವು ಅಧ್ಯಯನ ದೃಷ್ಟಿಯಿಂದ ಪೂರ್ವದ ಹಳೆಗನ್ನಡ, ಹಳೆಗನ್ನಡ ನಡುಗನ್ನಡ, ಹೊಸಗನ್ನಡ ಎಂದು ಹೊಸಗನ್ನಡವನ್ನು ಪ್ರಮುಖವಾಗಿ ನಾಲ್ಕು ಘಟಕಗಳಾಗಿ ವಿಭಾಗ ಮಾಡಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಎಂದು ಗುರುತಿಸಿ ಅಧ್ಯಯನ ಮಾಡುತ್ತೇವೆ. ಈ ಎಲ್ಲಾ ಕಾಲಘಟ್ಟಗಳಲ್ಲಿ ಕನ್ನಡ ಸಾಹಿತ್ಯ ಶ್ರೀಮಂತವಾಯಿತು. ಅನೇಕ ಕಥೆ, ಕಾದಂಬರಿ, ನಾಟಕ, ಕೃತಿಗಳು ರಚನೆಗೊಂಡವು. ಕಾಲ ನಂತರದಲ್ಲಿ ಅವುಗಳು ಚಲನಚಿತ್ರಗಳಾಗಿಯೂ ಮೂಡಿ ಬಂದವು ಮತ್ತು ಯಶಸ್ಸನ್ನು ಪಡೆದುಕೊಂಡವು.

### ಕನ್ನಡ ಚಲನಚಿತ್ರರಂಗದ ಪರಿಚಯ

ಕನ್ನಡ ಚಲನಚಿತ್ರ ಪ್ರಾರಂಭವಾಗುವುದು ಯಾರಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಟಿ.ಪಿ.ಕೈಲಾಸಂ ನಟಿಸಿದ ಮೃಚ್ಛಟಿಕದಿಂದ ಪ್ರಾರಂಭವಾಗುತ್ತದೆ. ಇದೊಂದು ಮೂಕಿಚಿತ್ರವಾಗಿದ್ದರೂ ಕಲಾಪುಕಾರಕ್ಕೆ ಜನ್ಮ ನೀಡುತ್ತದೆ ಎಂದು ಅದನ್ನು ಸೃಷ್ಟಿಸಿದ ಉದ್ಯಮಕ್ಕೂ ತಿಳಿದಿರಲಿಲ್ಲ. ಈ ಸಿನಿಮಾ ಹಲವಾರು ಪುರಸ್ಕಾರಗಳನ್ನು ಮತ್ತು ಮುಂಬರುವ ವರ್ಷಗಳಲ್ಲಿ ಶ್ರೇಷ್ಠ ವ್ಯಕ್ತಿಗಳನ್ನು ಪರಿಚಯಿಸಲು ಭದ್ರ ಅಡಿಪಾಯ ಹಾಕಿತು.

ಮೊದಲ ಮೂಕಿ ಚಿತ್ರದ ಮೂರು ವರ್ಷಗಳ ನಂತರ ಕನ್ನಡದ ಮೊದಲ ಧ್ವನಿಯ ಚಿತ್ರವು ಸತಿ ಸುಲೋಚನಾ ಎಂಬ ಹೆಸರಿನಿಂದ ಬಂದಿತು. ಈ ಚಿತ್ರವನ್ನು ವೈ ವಿ. ಸುಬ್ಬರಾವ್ ನಿರ್ದೇಶಿಸಿದರು ಸುಬ್ಬಯ್ಯ ನಾಯ್ಡು ತ್ರಿಪುರಾಂಬ ಮತ್ತು ಅನೇಕ ಜನರು ಈ ಚಿತ್ರದಲ್ಲಿ ನಟಿಸಿದ್ದಾರೆ. 1940ರ ದಶಕದ ಅವಧಿಯಲ್ಲಿ 21 ಕನ್ನಡ ಚಲನಚಿತ್ರಗಳು ತೆರೆಕಂಡವು ಮತ್ತು ಕನ್ನಡ ಪ್ರೇಕ್ಷಕರು ಈ ಚಲನಚಿತ್ರಗಳನ್ನು ಮನಪೂರ್ವಕವಾಗಿ ಒಪ್ಪಿಕೊಂಡಿದ್ದಾರೆ. ಕನ್ನಡ ಚಲನಚಿತ್ರ ಎಂದಾಗ ನೆನಪಾಗುವ ಹೆಸರು ವರನಟ ಡಾ. ರಾಜಕುಮಾರ್ ಇವರು 1950ರಲ್ಲಿ ಬಿಡುಗಡೆಯಾದ ಶ್ರೀನಿವಾಸ ಕಲ್ಯಾಣದ ಮೂಲಕ ಬೆಳ್ಳಿತೆರೆಯ ಪರದೆಯ ಮೇಲೆ ಮೊದಲ ಬಾರಿಗೆ ಕಾಣಿಸಿಕೊಂಡರು. ಅಲ್ಲಿ ಅವರು ಋಷಿಯಾ ಸಣ್ಣ ಪಾತ್ರವನ್ನು ಅಭಿನಯಿಸಿದರು ಅಷ್ಟೇ, 1954 ರಲ್ಲಿ ಡಾ. ರಾಜಕುಮಾರ್ ಎಚ್. ಎಲ್. ಎಸ್ .ಸಿಂಹ

ಅವರು ನಿರ್ದೇಶಿಸಿದ ಬೇಡರ ಕಣ್ಣಪ್ಪ ಎಂಬ ಸಿನಿಮಾದಲ್ಲಿ ನಾಯಕರಾಗಿ ಕಾಣಿಸಿಕೊಂಡರು. ಈ ಸಿನಿಮಾ ರಾಷ್ಟ್ರ ಪ್ರಶಸ್ತಿಯನ್ನು ಪಡೆದ ಮೊದಲ ಚಲನಚಿತ್ರವಾಗಿದೆ. 1964 ರವರೆಗೆ ಕನ್ನಡ ಸಿನಿಪ್ರಿಯರು ಸಿನಿಮಾ ನೋಡುತ್ತಿದ್ದರು. ಅಮರಶಿಲ್ಪಿ ಜಕ್ಕಣಚಾರಿ ಎಂಬ ಕನ್ನಡ ಚಿತ್ರರಂಗದ ಮೊದಲ ಬಣ್ಣದ ಚಿತ್ರವಾಗಿಸುವ ಮೂಲಕ ಬಿ. ಎಸ್ ರಂಗರವರು ಮೊದಲ ಮಾದರಿಯನ್ನು ತಂದರು. ಈ ಸಿನಿಮಾದಲ್ಲಿ ಕಲ್ಯಾಣಕುಮಾರ್ ಮತ್ತು ಬಿ, ಸರೋಜಾದೇವಿ ಅಭಿನಯಿಸಿದ್ದರು. ಈ ರೀತಿಯಾಗಿ ಕನ್ನಡ ಸಾಹಿತ್ಯದ ಅನೇಕ ಕಾದಂಬರಿ ನಾಟಕಗಳು ಕನ್ನಡ ಚಲನಚಿತ್ರಗಳು ತೆರೆಗೆ ಬರಲು ಪ್ರಾರಂಭಿಸಿದವು ಮತ್ತು ಆ ಚಲನಚಿತ್ರಗಳು ಅನೇಕ ಪ್ರಶಸ್ತಿಯನ್ನು ಪಡೆದುಕೊಂಡವು.

ಪ್ರಕಟಿತ ಕಥೆಯನ್ನು ಆಧರಿಸಿದ ಪ್ರಪಂಚದಲ್ಲಿ ಮೊದಲ ಚಿತ್ರ ನಿರ್ಮಾಣಗೊಂಡಿದ್ದು ದಿನ ಗ್ರೇಟ್ ಟ್ರೈನ್ ರಾಬರಿ ಇ3ರಲ್ಲಿ ಆ ಚಿತ್ರ ಯಶಸ್ಸುಗಳಿಸಿತು.ಹಾಗೆಯೇ ಚಿತ್ರವೊಂದರ ಯಶಸ್ಸಿಗೆ, ಚಿತ್ರಕಥೆಯು ಅನಿವಾರ್ಯತೆಯನ್ನು ಎತ್ತಿ すげえず。 ಚಲನಚಿತ್ರ ಹುಟ್ಟಿದ ದಿನದಿಂದ ಇಲ್ಲಿಯವರೆಗೆ ಜಗತ್ತಿನಲ್ಲಿರುವ ನೂರಾರು ಭಾಷೆಗಳಲ್ಲಿ ಸಾವಿರಾರು ಸಾಹಿತ್ಯ ಕೃತಿಗಳು ನಾಟಕ, ಕಾದಂಬರಿಗಳು, ಜನಪದ ಕಥೆಗಳು ಸಿನಿಮಾವಾಗಿ ರೂಪವನ್ನು ಪಡೆದಿವೆ ಮತ್ತು ಯಶಸ್ವಿ ವಾಹಕವಾಗಿಯೂ ಕೆಲಸ ಮಾಡುತ್ತಿವೆ. ಈಗ ನಾವು ಕನ್ನಡದ ಚಲನಚಿತ್ರಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಮಾತನಾಡುವುದಾದರೆ 1921 ರಲ್ಲಿ ನಿರೂಪಮ ಎಂಬ ಹೆಸರಿನ ಸಿನಿಮಾ ತೆರೆ ಕಂಡಿತು ಇದು ಕನ್ನಡದ ಪೂರ್ಣ ಪ್ರಮಾಣದ ಸಾಹಿತ್ಯ ಕೃತಿಯಾಗಿ ಕೈಲಾಸಂ ರಚನೆ ಮಾಡಿದ ವಸಂತ ಸೇನಾ 1922 ರಲ್ಲಿ ಶಿವರಾಮ ಕಾರಂತರು ರಚಿಸಿದ ಭೂತರಾಜ 1929ರಲ್ಲಿ ತೆರೆಕಂಡವು ಸತಿ ಸುಲೋಚನ, ಸಂಸಾರ ನೌಕ, ಸತ್ಯ ಹರಿಶ್ಚಂದ್ರ ಚಂದ್ರಹಾಸ, ಸದಾರಮೆ.ಭಕ್ತದ್ರುವ ಮುಂತಾದವು ನಾಟಕ ಪ್ರಕಾರಕ್ಕೆ ಬಂದರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಬರೆದಿರುವ ಕಾಕನಕೋಟೆ. ಎ .ಎನ್. ಮೂರ್ತಿರಾಯರು ಬರೆದಿರುವ ಆಷಾಢಭೂತಿ ಮತ್ತು ಕಳಸಾಪುರದ ಹುಡುಗರು, ಸಿಕ್ಕು, ಋಷ್ಯಶೃಂಗ ನಾಗಮಂಡಲ ಮುಂತಾದವು ತೆರೆಕಂಡವು 1962ರಲ್ಲಿ ಕೃಷ್ಣಮೂರ್ತಿ ಪೌರಾಣಿಕರ ಧರ್ಮದೇವತೆಯನ್ನು ಆಧಾರವಾಗಿಟ್ಟುಕೊಂಡು ಕರುಣೆಯ ಕುಟುಂಬದ ಕಣ್ಣು ತೆರೆಕಂಡಿತು. ಇದೇ ಲೇಖಕರು ಕುಲವಧು ಹಾಗೂ ತ.ರಾ.ಸು ರವರ ಚಂದ್ರವಳ್ಳಿಯ ತೋಟ ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದವು 968 ರಲ್ಲಿ ಅ.ನ.ಕೃ ಕಾದಂಬರಿ ಸಂಧ್ಯಾ ರಾಗ ತೆರೆಕಂಡಿತು. ಈ ಸಂಧ್ಯಾರಾಗ ಶರಣ ಚಿತ್ರದಲ್ಲಿ ಸಂಗೀತಗಾರನ ಬದುಕಿನ ತಲ್ಲಣಗಳನ್ನು ಎಳೆ ಎಳೆಯಾಗಿ ಮೆಲೋ ಡ್ರಾಮವನ್ನು ಆಧರಿಸಿ ಒಂದು ಕಥಾ ಸ್ಮರೂಪದ ಹುಟ್ಟಿಗೆ ಮೂಲ ಪ್ರೇರಣೆಯಾಯಿತು.

ಕನ್ನಡ ಚಲನಚಿತ್ರ ರಂಗವು ಇಲ್ಲಿಯವರೆಗೆ ಹಲವಾರು ಸಾಹಿತಿಗಳ ಸೇವೆಯನ್ನು ಸಂಪೂರ್ಣವಾಗಿ ಪಡೆದು ಮಿಂಚಿದೆ. ಸತಿ ಸುಲೋಚನಾ 1934ರಲ್ಲಿ ತೆರೆಕಂಡಿತು. ಸಾಹಿತ್ಯ ಒದಗಿಸಿದವರು ಬೆಳ್ಳಾವೆ ನರಸಿಂಹ ಶಾಸ್ತ್ರಿ ಅವರು ತದನಂತರ ಕುವೆಂಪು ಬೇಂದ್ರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ, ಅ ನ ಕೃಷ್ಣಮೂರ್ತಿ. ಕೆ .ಎಸ್ .ನರಸಿಂಹಸ್ವಾಮಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ತರಾಸು, ತ್ರಿವೇಣಿ .ಎಂ.ಕೆ.ಇಂದಿರಾ. ಗಿರೀಶ್ ಕಾರ್ನಾಡ್ ಎಸ್ .ಎಲ್. ಬೈರಪ್ಪ ಅನಂತಮೂರ್ತಿ ಚಂದ್ರಶೇಖರ ಕಂಬಾರ ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಪಿ. ಲಂಕೇಶ್, ವಾಣಿ ಕನ್ನಡ ಚಲನಚಿತ್ರ ನಿರ್ದೇಶಕ ಎಂದಾಗ ನೆನಪಾಗುವುದು ಪುಟ್ಟಣ್ಣ ಕಣಗಾಲ್ ಇವರು ಕನ್ನಡ ಸಾಹಿತ್ಯದಲ್ಲಿ ರಚನೆಗೊಂಡ ಬಹುತೇಕ ಕಾದಂಬರಿಗಳನ್ನು ಆಧರಿಸಿ ಚಲನಚಿತ್ರ ನಿರ್ಮಾಣ ಮಾಡಿದ್ದಾರೆ. ಒಟ್ಟು ಆ ಚಲನಚಿತ್ರಗಳು ಮೊದಲನೆಯ ಚಲನಚಿತ್ರ ಬೆಳ್ಳಿ ಮೋಡ( 1866 ).ಗೆಜ್ಜೆಪೂಜೆ (90), ಶರಪಂಜರ (97 ). ನಾಗರಹಾವು( 1972), ಮಂಗಳ( 1975 ) ಎಡಕಲು ಗುಡ್ಡದ ಮೇಲೆ( 1973). ಉಪಾಸನೆ(974 ) ಅಮೃತಗಳಿಗೆ (9ಜ4) ಶರಪಂಜರ ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ್ದು ಆಸರಲ್ಲಿ ಭಾರತೀಯ ಕನ್ನಡ ಚಲನಚಿತ್ರ ವಾಯಿತು ತ್ರಿವೇಣಿಯವರ ಕಾದಂಬರಿಯೂ ಸಮೃದ್ಧವಾಗಿ ದೃಶ್ಯಾತ್ಮಕವಾಗಿತ್ತು. ಶರಪಂಜರ ಚಲನಚಿತ್ರದಲ್ಲಿ ಅಭಿನಯಿಸಿದವರು ಕಲ್ಪನಾ ಮತ್ತು ಗಂಗಾಧರ್ ಪುಟ್ಟಣ್ಣನವರು ಈ ಕಾದಂಬರಿ ನೈಜತೆಯನ್ನು ಮೆರದಿದ್ದಾರೆ. ತ್ರಿವೇಣಿಯವರ ಕಾದಂಬರಿಯ ಬಹುತೇಕ ಸಂಭಾಷಣೆಗಳನ್ನು ಉಳಿಸಿಕೊಂಡು ಅವರಿಗೆ ಉಪಕಾರ ಸಲ್ಲಿಸಿದ್ದಾರೆ ಈ ಚಲನಚಿತ್ರ 1972 ರಲ್ಲಿ 20ನೇ ರಾಷ್ಟ್ರೀಯ ಚಲನಚಿತ್ರ ಎಂದು ಪ್ರಶಸ್ತಿಯನ್ನು ಗಳಿಸಿಕೊಂಡಿತು. 1970– 1 ರಲ್ಲಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ಮೊದಲ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಪಡೆದುಕೊಂಡಿದೆ ನಂತರ ಈ ಚಲನಚಿತ್ರವನ್ನು ತೆಲಗು ಭಾಷೆಯಲ್ಲಿ ಕೃಷ್ಣವೇಣಿ ಎಂದು ಮಾಡಲಾಯಿತು ಈ ಚಲನಚಿತ್ರದಲ್ಲಿ ವಾಣಿಶ್ರೀ ನಟಿಸಿದರು

ಕನ್ನಡ ಸಾಹಿತಿ ಎಸ್.ಎಲ್. ಭೈರಪ್ಪನವರ ಕಾದಂಬರಿ ವಂಶವೃಕ್ಷ ಆಧರಿಸಿ ಗಿರೀಶ್ ಕಾರ್ನಾಡ್ ಹಾಗೂ ನಿರ್ದೇಶಸಿದ ಚಲನಚಿತ್ರ ಇದು ರಾಷ್ಟ್ರ ರಾಜ್ಯಮಟ್ಟದಲ್ಲಿ ಹಲವಾರು ಪ್ರಶಸ್ತಿಗಳನ್ನು ಗಳಿಸಿಕೊಂಡಿತು ಇದರ ಕರ್ತೃ ಅವರಿಗೆ ಅತ್ಯುತ್ತಮ ಕಥಾ ಲೇಖಕ ಪ್ರಶಸ್ತಿ ನೀಡಿದಾಗ ಅವರು ಅದನ್ನು ನಿರಾಕರಿಸಿದರು ನಾನು ಕಾದಂಬರಿ ರಚಿಸುವುದು ಸಿನಿಮಾ ಮಾಡಲು ಅಲ್ಲ ಎಂದರು ಹೇಳಿಕೆಗೆ ಪ್ರತಿಭಟನೆಗಿಂತ ಹೆಚ್ಚಾಗಿ ಪುರಸ್ಕಾರವೇ ಸಿಕ್ಕಿತು. ಕನ್ನಡ ಚಲನಚಿತ್ರರಂಗದಲ್ಲಿ ಕಾದಂಬರಿ ಆಧಾರಿತ ಚಿತ್ರಗಳ ಸಂಖ್ಯೆ ಹೆಚ್ಚಿತು ಮಧ್ಯಮ ವರ್ಗದ ಆದರ್ಶ ಪಾತ್ರಗಳಾದ ತಂದೆ ತಾಯಿ. ಪತಿ ಪತ್ನಿ ಮಕ್ಕಳು ತಾಯಿ ಹಾಗೂ ಇವರ ನಡುವಿನ ಬಾಂಧವ್ಯವನ್ನು ತೆರೆಯ ಮೇಲೆ ತರಲು ಪ್ರಯತ್ನಪಟ್ಟು ಯಶಸ್ವಿಯಾದರು ನಂತರ ರ ದಶಕದಲ್ಲಿ ಸಂಸ್ಕಾರ, ಕಾಡು ವಂಶವೃಕ್ಷ ತಬ್ಬಲಿಯು ನೀನಾದೆ ಮಗನೇ, ಹೇಮಾವತಿ ಮಾಡಿ ಮಾಡಿದವರು, ಚೋಮನ ದುಡಿ ಪಲ್ಲವಿ ಮೂರು ದಾರಿಗಳು, ಈ ಕಾದಂಬರಿಗಳನ್ನಾಧರಿಸಿದ ಚಲನಚಿತ್ರಗಳು ತೆರೆಕಂಡವು.

ಮುಂದಿನ ದಿನಗಳಲ್ಲಿ ತಬರನ ಕಥೆ .ಭುಜಂಗಯ್ಯನ ದಶಾವತಾರ, ಮೈಸೂರು ಮಲ್ಲಿಗೆ ಸಂಗ್ಯಾ ಬಾಳ್ಯಾ ಗಂಗಾಮಾಯಿ ಮನೆಗಳಲ್ಲಿ ಮಧುಮಗಳು ತಾಯಿ ಸಾಹೇಬ, ದ್ವೀಪ ಕಾನೂರು ಸುಬ್ಬಮ್ಮ ಹೆಗ್ಗಡತಿ ಮುಂತಾದ ಕೃತಿಗಳು ತೆರೆಕಂಡವು 70ರ ದಶಕದ ಮಧ್ಯಾಂತರದಲ್ಲೇ ಈ ಹೊಸ ಅಲೆಯ ಪ್ರವಾಹ ಕಡಿಮೆಯಾಗುತ್ತಾ ಬಂದಿತು ಗುಜರಾತಿ ಕಾದಂಬರಿಯೂ ಕೂಡ ಕನ್ನಡ ಚಲನಚಿತ್ರ ರಂಗದಲ್ಲಿ ಸಿನಿಮಾವಾಗಿ ಹೆಸರುಗಳಿಸಿತು. ಪನ್ನಾಲಾಲ್ ಪಟೇಲ್ ರವರು ರಚಿಸಿದ ಮಲೇಲಾ ಕಾದಂಬರಿಗೆ ಸಂಭಾಷಣೆಯನ್ನು ರಚಿಸಿದರೆ ಟಿ.ಎಸ್. ನಾಗಾಭರಣ ರವರು ನಿರ್ದೇಶನ ಮಾಡಿದ್ದಾರೆ ಈ ನಾಟಕ ಆಧಾರಿತ ಚಲನಚಿತ್ರವು

ನವೆಂಬರ್ 15 1965ರಲ್ಲಿ ತೆರೆಕಂಡಿತು. ಈ ಚಲನಚಿತ್ರ ಕನಕನಾಗಿ ಶಿಲ್ಪ, ಸ್ವಾಮಿಯಾಗಿ ಎಣಿಗಿ ಬಾಳಪ್ಪ, ಮಣಿಪಾತ್ರದಲ್ಲಿ ಪವಿತ್ರ ಲೋಕೇಶ್ .ರಾಜೀವ್ ಸಿಂಗಾರಿಗೌಡ ಪಾತ್ರದಲ್ಲಿ ಮುಖ್ಯಮಂತ್ರಿ ಚಂದ್ರು ಬಂಗಾರು ಪಾತ್ರದಲ್ಲಿ ಹೊನ್ನಾವಳಿ ಕೃಷ್ಣ ಅಂದಾನಿಯಾಗಿ, ಕರಿಬಸವಯ್ಯ ಮಂಡ್ಯ ರಮೇಶ್ ಅರುಣ್ ಸಾಗರ್, ಕೃಷ್ಣಗೌಡ ಅಶೋಕ್, ಪ್ರಕಾಶ್ ಶೆಣೈ ರಾಧಾ, ರಾಮಚಂದ್ರ .ಜ್ಯೋತಿ ಗುರು ಚರಣ್ ಶನಿ ಮಹಾದೇವಪ್ಪನವರು ಕಾಣಿಸಿಕೊಳ್ಳುತ್ತಾರೆ ಗರಿಷ್ಠ ಕೇಂದ್ರಗಳಲ್ಲಿ 365 ದಿನಗಳಿಗಿಂತ ಹೆಚ್ಚು ಥೀಯಟರ್ ರನ್ ಗಳಿಸಿತು .ಜನುಮದ ಜೋಡಿಯು ಬೆಂಗಳೂರಿನ ಗರಿಷ್ಠ ಸಂಖ್ಯೆಯ ತನ್ನ ರಜತ ಮಹೋತ್ಸವದ ದಾಖಲೆಯನ್ನು ಗಳಿಸಿತು.[5] ಫಿಲಂ ಹಾಲ್ ಗಳಲ್ಲಿ

ಬಂಗಾರದ ಮನುಷ್ಯ ಕನ್ನಡ ಚಲನಚಿತ್ರ ಇತಿಹಾಸದಲ್ಲಿ ಎರಡು ವರ್ಷಗಳ ಕಾಲ ಪ್ರದರ್ಶನಗೊಂಡ ಚಿತ್ರ 922ರ ಭಾರತೀಯ ಕನ್ನಡ ಭಾಷೆ ಆಧಾರಿತವಾಗಿರುವ ಅದೇ ಹೆಸರಿನ ನಾಟಕ ಟಿ.ಕೆ. ರಾಮರಾವ್ ರವರು ಪತ್ತೇದಾರಿ ಆಧಾರಿತ ಮತ್ತು ಅಪರಾಧ ಆಧಾರಿತ ಕಾದಂಬರಿಗಳಿಗೆ ಹೆಸರುವಾಸಿಯಾಗಿದ್ದರು. ಆದರೆ ಈ ಬಂಗಾರದ ಮನುಷ್ಯ ಚಲನಚಿತ್ರವು ಸಾಮಾಜಿಕ ನಾಟಕವಾಗಿದೆ ಈ ನಾಟಕವನ್ನು ನಿರ್ದೇಶಿಸಿದವರು ಶ್ರೀನಿಧಿ ಇದಕ್ಕೂ ಮೊದಲು ಇವರು ಡಾ. ರಾಜಕುಮಾರ್ ಅವರೊಂದಿಗೆ ಮೇಯರ್ ಮುತ್ತಣ್ಣ ಚಲನಚಿತ್ರಗಳಲ್ಲಿ ಕೆಲಸ ಮಾಡಿದ್ದಾರೆ ಇದರಲ್ಲಿ ನಟಿಸಿದ್ದಾರೆ ಈಗಿರುವ ಬೆಂಗಳೂರಿನ ಭೂಮಿಕಾ ಥಿಯೇಟರ್ ಹಿಂದೆ ಸ್ಟೇಟ್ಸ್ ಥಿಯೇಟರ್ ಎರಡು ವರ್ಷಗಳ ಕಾಲ ಚರಣ ಚಿತ್ರವನ್ನು ಪ್ರದರ್ಶಿಸಲಾಯಿತು. ಮೈಸೂರಿನ ಚಾಮುಂಡೇಶ್ವರಿ ಥಿಯೇಟರ್ ನಲ್ಲಿ 80 ವಾರಗಳ ಕಾಲ ಪ್ರದರ್ಶನಗೊಂಡಿತು ಈ ಚಲನ ಚಿತ್ರವು 1988 ರಲ್ಲಿ ಮರು ಬಿಡುಗಡೆ ಯಾದಾಗ 25 ವಾರಗಳ ಓಟವನ್ನು ಕಂಡಿತು.

ಕಥಾವಸ್ತು ರಾಜೀವ ತನ್ನ ಸಹೋದರಿ ಶಾರಾದಳನ್ನು ಭೇಟಿ ಮಾಡಲು ಹೋಗುತ್ತಿದ್ದನು. ಆ ಸಂದರ್ಭದಲ್ಲಿ ಅವನಿಗೆ ಅವರ ಸೋದರ ಮಾಮ ಸತ್ತಿದ್ದಾನ ಎಂದು ತಿಳಿಯುತ್ತದೆ. ರಾಜೀವ ಅವರ ಅಕ್ಕನ ಕುಟುಂಬವನ್ನು ನೋಡಿಕೊಳ್ಳಲು ಯಾರು ಉಳಿಯುವುದಿಲ್ಲ ಅವರು ಅವರ ಪರಿಸ್ಥಿತಿಯನ್ನು ಸುಧಾರಿಸಲು ಸಾಲವನ್ನು ತೆಗೆದುಕೊಳ್ಳುತ್ತಾರೆ ಮತ್ತು ಅವರ ಸೋದರ ಮಾವನ ಜಮೀನಿನಲ್ಲಿ ನೀರಾವರಿ ಪ್ರಾರಂಭಿಸುತ್ತಾರೆ. ಶಾರದೆಯ ಮಕ್ಕಳು ಚಕ್ರಪಾಣಿ ಮತ್ತು ಕೇಶವ ಉನ್ನತ ವ್ಯಾಸಂಗಕ್ಕಾಗಿ ಬೆಂಗಳೂರಿಗೆ ತೆರಳುತ್ತಾರೆ. ಈ ಸಂದರ್ಭದಲ್ಲಿ ರಾಜೀವ ತನ್ನ ನೆರೆಮನೆಯ ಮಗಳು ಲಕ್ಷ್ಮಿಯನ್ನು ಪ್ರೀತಿಸುತ್ತಾನೆ ರಾಜೀವ್ ಅವರ ಜೀವನವನ್ನು ಮತ್ತನ್ನು ಉತ್ತಮಗೊಳಿಸಲು ಗ್ರಾಮದ ಬಳಿ 20 ಎಕರೆ ಬಂಜರು ಭೂಮಿ ಖರೀದಿಸಲು ನಿರ್ಧರಿಸುತ್ತಾರೆ. ಗೌರವಾನ್ವಿತ ವ್ಯಕ್ತಿಯಾಗುತ್ತಾರೆ ಗಣನೀಯ ಲಾಭವನ್ನು ಗಳಿಸುತ್ತಾರೆ. ಆದರೆ ರಾಜೀವ ಪ್ರತಿ ಆರು ತಿಂಗಳಿಗೊಮ್ಮೆ ಆಗಾಗ ಬೆಳಗಾವಿಯ ಮತ್ತೊಂದು ನಗರಕ್ಕೆ ತೆರಳುತ್ತಾರೆ. ಅವರ ಒಂದು ಪ್ರವಾಸದ ಸಮಯದಲ್ಲಿ ಬೆಳಗಾವಿಯಲ್ಲಿ ಶರಾವತಿ ಎಂಬ ಮಹಿಳೆ ಅವರ ಮಗ ಕಿಶೋರ್ ಅವರನ್ನು ಭೇಟಿ ಮಾಡುತ್ತಾರೆ ಈ ರೀತಿಯಾಗಿ ಕಥೆ ಸಾಗುತ್ತದೆ .

ಈ ಚಲನಚಿತ್ರದಲ್ಲಿ ರಾಜಕುಮಾರ್ .ರಾಜೀವ, ಭಾರತಿ ಲಕ್ಷ್ಮೀ ಆದವಾನಿ ಲಕ್ಷ್ಮೀ ದೇವಿ, ಬಾಲಕೃಷ್ಣ ದ್ವಾರಕೀಶ್ ವಜ್ರಮುನಿ, ಬಿ. ರಾಧರವರು ಕಾಣಿಸಿಕೊಳ್ಳುತ್ತಾರೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ರಚಿಸಿದ ಕಾಕನಕೋಟೆ ನಾಟಕವು 31ಡಿಸೆಂಬರ್ 1976ರಲ್ಲಿ ಕನ್ನಡದಲ್ಲಿ ಬಿಡುಗಡೆಯಾದ ಚಿತ್ರ ಈ ಚಿತ್ರವನ್ನು ಸಿ.ಆರ್ ಸಿಂಹ ರವರು ನಿರ್ದೇಶಿಸಿದ್ದಾರೆ, ಚಲನಚಿತ್ರದ ಕಥಾವಸ್ತು ಮೈಸೂರು ಜಿಲ್ಲೆಯ ಬುಡಕಟ್ಟು ಜನರ ಶೋಷಣೆಯನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ ಕಾಕನಾಯಕನ ಕಥೆಯನ್ನು ಹೇಳುತ್ತದೆ. ಈ ಚಲನಚಿತ್ರಕ್ಕೆ ಸಿ .ಅಶ್ವತ್ ಸಂಗೀತ ಸಂಯೋಜಿಸಿದ್ದಾರೆ ಅನುಭವಿ ನಟರು ಈ ಚಿತ್ರದಲ್ಲಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.ಈ ಚಿತ್ರವು ವಿಮರ್ಶ ಕರ ಮೆಚ್ಚುಗೆಯನ್ನು ಪಡೆಯಿತು ಮೂರನೇ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಗಿರೀಶ್ ಕಾರ್ನಾಡ್ ಈ ಚಿತ್ರಕ್ಕೆ ಚಿತ್ರಕಥೆ ಮತ್ತು ಸಂಭಾಷಣೆಯನ್ನು ಪಡೆದಿದ್ದಾರೆ ಗಿರೀಶ್ ಕಾಸರವಳ್ಳಿ ಸಹಾಯಕ ನಿರ್ದೇಶನವನ್ನು ಮಾಡಿದ್ದಾರೆ.

ಈ ಚಿತ್ರದಲ್ಲಿ ಕಾಕಾ ನಾಯಕನಾಗಿ ಲೋಕೇಶ್, ಶ್ರೀನಾಥ್, ಲೋಕನಾಥ್, ಕೃಷ್ಣರಾಜ್ .ಲಾವಣ್ಯ ಮೂರ್ತಿ ಅಭಿನಯಿಸಿದ್ದಾರೆ. ಕನ್ನಡ ಹೆಸರು ಶಿವರಾಮ ಕಾರಂತರನ್ನು, ಇವರು ಬರೆದ ಮೂಕಜ್ಜಿಯ ಕನಸುಗಳು ಈ ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ ಇದು ಎಲ್ಲರಿಗೂ ಗೊತ್ತಿರುವ ವಿಚಾರ ಈ ಕಾದಂಬರಿಯನ್ನ ನಿರ್ದೇಶಕ ಕೆ. ಪಿ ಶೇಷಾದ್ರಿ ಅವರು 2015ರಲ್ಲಿ ಸಿನಿಮಾ ವಾಗಿಸುವ ಮೂಲಕ ಹಿಂದಿನ ಯುವ ಪೀಳಿಗೆಗೆ ಮೂಕಜ್ಜಿಯನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ ಈ ಕಾದಂಬರಿಯಲ್ಲಿ ಬರುವ ವಿಚಾರಗಳು ಸರ್ವಕಾಲಿಕವಾಗಿರುವಂಥದ್ದು, ಪ್ರಕೃತಿ ದೇವರು, ಸಂಬಂಧ ಲೈಂಗಿಕತೆ ಧರ್ಮಗಳ ತಿಕ್ಕಾಟ ಹೀಗೆ ನಾನಾ ವಿಚಾರಗಳನ್ನು ಕಾದಂಬರಿ ಜನರಿಗೆ ತಿಳಿಸಿತ್ತು. ಅವನೆಲ್ಲಾ ದೃಶ್ಯ ರೂಪಕ್ಕೆ ತರುವಲ್ಲಿ ನಿರ್ದೇಶಕ ಟಿ. ಶೇಷಾದ್ರಿ ಅವರ ಯಶಸ್ವಿಯಾಗಿದ್ದಾರೆ. ಈ ಸಿನಿಮಾದಲ್ಲಿ ಬರುವ ಪಾತ್ರಗಳು ಮೂಕಜ್ಜಿ (ಬಿ. ಜಯಶೀಲ), ಸುಬ್ರಾಯ ಆರವಿಂದ್ ಕೊಪ್ಪಿಕರ್ ಸೀತಾನಂದಿನಿ ಮೂಕಾಂಬಿಕಾ (ಕಾವ್ಯ ಶಾ) ರಾಮಣ್ಣ(ಪಭು) ಅವರ ಮಾತುಗಳು ಇಡೀ ಕಥೆಯ ಸಾರವನ್ನು ತಿಳಿಸುತ್ತದೆ ಮೂಕಜ್ಜಿಗೆ ಏನೋ ವಿಶೇಷ ಶಕ್ತಿ ಇದೆ ಅನಿಸುತ್ತದೆ ಅದೊಂದು ಶಕ್ತಿ ಎಂದು ಮೊಮ್ಮಗೆ ತಿಳಿದುಕೊಳ್ಳುತ್ತಾನೆ ಅಲ್ಲಿ ಅಜ್ಜಿಯ ತಿಳುವಳಿಕೆಯನ್ನು ಹೇಳಲು ನಿರ್ದೇಶಕರು ಬಳಸಿಕೊಂಡಿರುವ ನೆರಳು ಬೆಳಕಿನ ಆಟ ನೋಡುಗರ ಗಮನ ಸೆಳೆಯುತ್ತವೆ. ಹೀಗೆ ಪ್ರಸಿದ್ಧ ಕಾದಂಬರಿಯೊಂದು ಕನ್ನಡ ಚಲನಚಿತ್ರ ರಂಗದಲ್ಲಿ ಯಶಸ್ವಿ ಚಿತ್ರವಾಗಿ 2019ರ ನವೆಂಬರ್ ನಲ್ಲಿ ತೆರೆಕಂಡಿತು ಕನ್ನಡ ಚಲನಚಿತ್ರದಲ್ಲಿ ಸಾಹಿತ್ಯ ಆಧರಿಸಿ ಬರುವಂತಹ ಸಿನಿಮಾಗಳು ಕ್ಷೀಣಿಸುತ್ತ ಬಂದವು .

1963 ರಲ್ಲಿ ಚಲನಚಿತ್ರ ರಂಗದಲ್ಲಿ ಕವಿತೆಗಳನ್ನು ಹಾಡಾಗಿ ಅಳವಡಿಸಿಕೊಳ್ಳಲು ಪ್ರಾರಂಭಿಸಿದರು. ಕುವೆಂಪುರವರ ಯಾವ ಜನ್ಮದ ಮೈತ್ರಿ .ಕೆ. ಎಸ್ .ನರಸಿಂಹ ಸ್ವಾಮಿ ಅವರ ಇವಳು ಯಾರು ಬಲ್ಲ ಏನು, ದ.ರಾ .ಬೇಂದ್ರೆ ಅವರ ಮೂಡಣ ಮನೆಯ ಹಾಡು, ಸಿದ್ದಲಿಂಗಯ್ಯ ಅವರ ಕವಿತೆಗಳಿಗೆ ರಾಗ ಸಂಯೋಜಿಸಿ ಬಳಸಿಕೊಂಡರು .ಗೋಪಾಲಕೃಷ್ಣ ಅಡಿಗರ ಎಂಥ ಕಣ್ಣು ಲಕ್ಷ್ಮೀ ನಾರಾಯಣ ಭಟ್ಟರ ಎಂಥ ಮರುಳಯ .ಕುವೆಂಪು–ವರ ನಾನೆ ವೀಣೆ ನೀನೇ ತಂತಿ ಇಂಪಾದ ಸಾಹಿತ್ಯದ

ಗೀತೆಗಳು ಕನ್ನಡ ಚಲನಚಿತ್ರ ಸಮರ್ಪಕವಾಗಿ ಬಳಸಿಕೊಂಡರು ಕನ್ನಡ ಸಾಹಿತ್ಯದ ನಾಟಕ ಕಾದಂಬರಿ, ಕಥೆ ಕಾವ್ಯಗಳನ್ನು ಬಳಸಿಕೊಂಡು ಕನ್ನಡ ಚಲನಚಿತ್ರ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದು ಕೊಂಡು ತನ್ನ ಘನತೆಯ ಜೊತೆಗೆ ಮೌಲ್ಯವನ್ನು ಹೆಚ್ಚಿಸಿಕೊಂಡು ಜನಮಾನಸದಲ್ಲಿ ಬೆರೆತು ಪ್ರಸ್ತುತ ದಿನಗಳಲ್ಲಿ ಬಿಡುಗಡೆಯಾಗುತ್ತಿರುವ ಸಾಲು ಸಾಲು ಚಿತ್ರಗಳು ಅದರ ವಸ್ತುಗಳು ಸದಾ ಅಭಿವೃದ್ಧಿಯಾಗಿದ್ದರು. ಕಲಾತ್ಮಕವಾಗಿ ಮೆಚ್ಚುಗೆಗೊಳಿಸಿದರು ಗಲ್ಲಾಪೆಟ್ಟಿಗೆ ಮಾತ್ರ. ಖಾಲಿ ಖಾಲಿ ಎನ್ನುವ ಚಲನಚಿತ್ರಗಳು ಇದರಿಂದಾಗಿ ಮತ್ತೇ ದಶಕಗಳ ಹಿಂದಿನ ಯಶಸ್ವಿ ಚಿತ್ರಗಳ ಬಿಡುಗಡೆಯ ಪರ್ವ ಪ್ರಾರಂಭ ಮಾಡಿದ್ದನ್ನು ನೆನಪಿಸಿಕೊಳ್ಳಬಹುದು ಚುನಾವಣೆಯ ಸಂದರ್ಭಗಳಲ್ಲಿ, ಎಷ್ಟೇ ಇದ್ದರೂ ಎಷ್ಟೇ ಸಾಹಿತ್ಯದ ಕಾದಂಬರಿಗಳನ್ನು ಕಥೆಗಳನ್ನು ಕವನಗಳನ್ನು ಸಮರ್ಪಕವಾಗಿ ಬಳಸಿಕೊಂಡಾಗ ಅದನ್ನು ಮೆಚ್ಚಬೇಕಾದವರು ಪ್ರೇಕ್ಷಕರಾಗಿರುತ್ತಾರೆ ಅದನ್ನ ವಿಮರ್ಶೆ ಮಾಡುವವರು ಅವರೇ ಆಗಿದ್ದಾರೆ ಆದ್ದರಿಂದ ನಿರ್ದೇಶಕರು ಕಾದಂಬರಿಗಳನ್ನು, ಕಥೆಗಳನ್ನು, ಕವನಗಳನ್ನು, ಬಳಸಿಕೊಳ್ಳುವಾಗ ಕರ್ತೃಗಳ ನೈಜತೆಗೆ ಧಕ್ಕೆ ಬಾರದಂತೆ ಚಲನಚಿತ್ರಗಳನ್ನ ನಿರ್ಮಾಣ ಮಾಡಬೇಕು.